ದೂರವಾಣಿ ಸಂಖ್ಯೆ : 2419208/2419315/2419219/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: ಎಸಿ2(ಎಸ್)/363/2020-21

ದಿನಾಂಕ: 02.03.2023

## ಸುತ್ತೋಲೆ

ವಿಷಯ: ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ e-rupee ವ್ಯವಸ್ಥೆಯನ್ನು ಅಳವಡಿಸಿರುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಮೈಸೂರು ತಾಲ್ಲೂಕಿನ ಎಲ್ಲಾ ಕಾಲೇಜುಗಳ ಮತ್ತು ವಿದ್ಯಾರ್ಥಿನಿಲಯಗಳ ಬ್ಯಾಂಕ್ ಖಾತೆ VPA (Virtual Payment Address) ಯನ್ನು ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಲ್ಲಿಸುವ ಬಗ್ಗೆ.

ಉಲ್ಲೇಖ: ಸಹಾಯಕ ನಿರ್ದೇಶಕರು ಗ್ರೇಡ್-1 ರವರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲ್ಲೂಕು, ಡಾ.ಬಾಬು ಜಗಜೀವನರಾಂ ಭವನ ಕಟ್ಟಡ, ಆದಿಪಂಪ ರಸ್ತೆ ಒಂಟಿ ಕೊಪ್ಪಲು ಪೂರ್ವ ಬಡಾವಣೆ, ಮೈಸೂರು ಇವರ ಪತ್ರ ಸಂಖ್ಯೆ: ಸನಿಗ್ರೇಡ್-1/ಮೈ/ಶಿಕ್ಷಣ/ಸಿಆರ್/2022-23 ದಿನಾಂಕ: 20.02.2023.

******

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಮೈಸೂರು ತಾಲ್ಲೂಕಿನ ಎಲ್ಲಾ ಪದವಿ/ಸ್ನಾತಕೋತ್ತರ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಮೂಲಕ ಮಂಜೂರು ಮಾಡಲಾಗುತ್ತಿದ್ದು, ಅದರಂತೆ 2022-23ನೇ ಸಾಲಿನಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಮಂಜೂರು ಮಾಡಲಾದ ವಿದ್ಯಾರ್ಥಿವೇತನದ ಮೊತ್ತವನ್ನು e-rupee ಮುಖಾಂತರ ಪಾವತಿ ಮಾಡಲು ಸಮಾಜ ಕಲ್ಯಾಣ ಇಲಾಖೆಯಿಂದ ಕ್ರಮವಹಿಸಲಾಗಿರುತ್ತದೆ. e-rupee ಮೂಲಕ generate ಮಾಡಲಾದ voucher ಅನ್ನು redeem ಮಾಡಿಕೊಳ್ಳಲು ಈ ಕೆಳಕಂಡ ಬ್ಯಾಂಕುಗಳಲ್ಲಿ ಮಾತ್ರ VPA (Virtual Payment Address) ಲಭ್ಯವಿದ್ದು, ಪಾವತಿ ಮಾಡಲು ಅವಕಾಶವಿರುತ್ತದೆ.

| | | |
|---|---|---|
| 1. State Bank of India | 2. Canara Bank | 3. Bank of Baroda |
| 4. Axis Bank | 5. Indian Bank | 6. HDFC Bank |
| 7. ICICA Bank | 8. Punjab National Bank | 9. UCO Bank |

ಆದ್ದರಿಂದ ಮೇಲೆ ತಿಳಿಸಿರುವ ಬ್ಯಾಂಕ್‌ಗಳ ಶಾಖೆಗಳಲ್ಲಿ ಖಾತೆಯನ್ನು ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಮೈಸೂರು ತಾಲ್ಲೂಕಿನ ಎಲ್ಲಾ ಪದವಿ/ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರುಗಳು/ಆಡಳಿತಾಧಿಕಾರಿಗಳು/ಡೀನ್ ರವರುಗಳು ವಿದ್ಯಾಸಂಸ್ಥೆಯ ಬ್ಯಾಂಕಿನ ನಿಖರವಾದ VPA (Virtual Payment Address) ಅನ್ನು ಪಡೆದು Branch Manager (Bank) ಮತ್ತು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ/ಡೀನ್/ಆಡಳಿತಾಧಿಕಾರಿಗಳ ಜಂಟಿ ಸಹಿಯೊಂದಿಗೆ VPA ID ಯನ್ನು ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕಡ್ಡಾಯವಾಗಿ ಸಲ್ಲಿಸುವಂತೆ ತಿಳಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಇತರೆ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳು ಸಹ ಮೇಲಿನಂತೆ ಕ್ರಮವಹಿಸಿ, ಆಯಾ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಗೆ ಕಡ್ಡಾಯವಾಗಿ ಮಾಹಿತಿ ನೀಡುವಂತೆ ಕೋರಿದೆ.

ಸದರಿ ವಿಷಯ ಸಂಬಂಧ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಮಾಹಿತಿಯನ್ನು ಈ ಕಛೇರಿಗೆ ತಿಳಿಸಬೇಕಾಗಿ ಹಾಗೂ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.in. ನಲ್ಲಿ ಪ್ರಕಟಿಸಲಾಗಿದ್ದು, ಅದರಂತೆ ಕ್ರಮವಹಿಸಲು ಎಲ್ಲಾ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರಿಂದ ಕರಡು ಅನುಮೋದಿಸಿದೆ

ತಮ್ಮ ನಂಬುಗೆಯ,

ಉಪಕುಲಸಚಿವ(ಶೈಕ್ಷಣಿಕ)
ಉಪಕುಲಸಚಿವರು (ಶೈಕ್ಷಣಿಕ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

**ಗೆ,**

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ/ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪು.ತಿ.ನೊ.

3. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಮಾನಸಗಂಗೋತ್ರಿ, ಮೈಸೂರು.
4. ಡಾ.ಬಸಪ್ಪ, ನೋಡಲ್ ಆಫೀಸರ್, ಅಂಕಿಅಂಶಗಳ ಘಟಕ, NCHS ಕಟ್ಟಡ, ಮಾನಸಗಂಗೋತ್ರಿ, ಮೈಸೂರು-ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ನಿರ್ದೇಶಕರು ಗ್ರೇಡ್-1 ರವರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು, ತಾಲ್ಲೂಕು, ಡಾ.ಬಾಬು ಜಗಜೀವನರಾಂ ಭವನ ಕಟ್ಟಡ, ಆದಿಪಂಪ ರಸ್ತೆ ಒಂಟಿ ಕೊಪ್ಪಲು ಪೂರ್ವ ಬಡಾವಣೆ, ಮೈಸೂರು.
6. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಎಲ್ಲಾ ನಿಕಾಯದ ಡೀನರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ನಿರ್ದೇಶಕರು, ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಮಂಡ್ಯ/ಹಾಸನ/ಚಾಮರಾಜನಗರ.
11. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ, ಮಾನಸಗಂಗೋತ್ರಿ, ಮೈಸೂರು.
12. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು.
13. ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ಲಲಿತ ಕಲೆಗಳ ಕಾಲೇಜು ಕಟ್ಟಡ, ಮಾನಸಗಂಗೋತ್ರಿ, ಮೈಸೂರು.
14. ವಿಶೇಷಾಧಿಕಾರಿಗಳು, ಕುಲಪತಿಗಳ ಕಛೇರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
15. ಸಂಯೋಜಕರು, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು- ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ಕೋರಿದೆ.
16. ಎಲ್ಲಾ ಉಪ ಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು, ಆಡಳಿತ ವಿಭಾಗ ಮತ್ತು ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
17. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
18. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಸಹಾಯಕ ನಿರ್ದೇಶಕರ ಗ್ರೇಡ್-1 ರವರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲ್ಲೂಕು**

ಡಾ॥ ಬಾಬು ಜಗಜೀವನರಾಂ ಭವನ ಕಟ್ಟಡ, ಆದಿಪಂಪ ರಸ್ತೆ ಒಂಟಿ ಕೊಪ್ಪಲು ಪೂರ್ವ ಬಡಾವಣೆ ಪಡುವಾರಹಳ್ಳಿ, ಮೈಸೂರು
ಮೈಸೂರು-10, ದೂರವಾಣಿ ಸಂಖ್ಯೆ-0821-2520910 Email:-tswomys@gmail.com

---

ಸಂ/ಸನಿಗ್ರೇಡ್-1/ಮೈ/ಶಿಕ್ಷಣ/ಸಿಆರ್ /2022-23 ದಿನಾಂಕ: 20-02-2023

**<u>ಅತೀ ತುರ್ತು</u>**

Registrar Personal Section, University of Mysore
RP 1333
Dt 23/2/23

ರವರಿಗೆ
ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಮಾನ್ಯರೆ,

**ವಿಷಯ:** ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ e-rupee ವ್ಯವಸ್ಥೆಯನ್ನು ಅಳವಡಿಸಿರುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಮೈಸೂರು ತಾಲ್ಲೂಕಿನ ಎಲ್ಲಾ ಕಾಲೇಜುಗಳ ಮತ್ತು ವಿದ್ಯಾರ್ಥಿನಿಲಯಗಳ ಬ್ಯಾಂಕ್ ಖಾತೆ VPA (Virtual Payment Address)ಯನ್ನು ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ:ಸಕಇ/ಇಡಿಎಂ3/ವಿ.ವೇತನಕೋಶ/ಸಿಆರ್/2022-23, ದಿನಾಂಕ: 10.02.2023
2. ಮಾನ್ಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರುರವರ ಅಧ್ಯಕ್ಷತೆಯಲ್ಲಿ ದಿನಾಂಕ 17.02.2023 ರಂದು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು e-rupee ಮುಖಾಂತರ ಅನುಷ್ಠಾನ ಮಾಡುವ ಸಂಬಂಧ ನಡೆದ ಸಭೆಯ ನಡವಳಿಗಳು.
3. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ ಮೈಸೂರುರವರ ವಾಟ್ಸಪ್ ಸಂದೇಶ ದಿನಾಂಕ:16.02.2023

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)(2)(3)ರನ್ವಯ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಮೈಸೂರು ತಾಲ್ಲೂಕಿನ ಎಲ್ಲಾ ಪದವಿ/ಸ್ನಾತಕೋತ್ತರ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಮೂಲಕ ಮಂಜೂರು ಮಾಡಲಾಗುತ್ತಿದ್ದು, ಅದರಂತೆ 2022-23ನೇ ಸಾಲಿನಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಮಂಜೂರು ಮಾಡಲಾದ ವಿದ್ಯಾರ್ಥಿವೇತನದ ಮೊತ್ತವನ್ನು e-rupee ಮುಖಾಂತರ ಪಾವತಿ ಮಾಡಲು ಸಮಾಜ ಕಲ್ಯಾಣ ಇಲಾಖೆಯಿಂದ ಕ್ರಮ ವಹಿಸಲಾಗಿರುತ್ತದೆ. e-rupee ಮೂಲಕ generate ಮಾಡಲಾದ voucher ಅನ್ನು redeem ಮಾಡಿಕೊಳ್ಳಲು ಈ ಕೆಳಕಂಡ ಬ್ಯಾಂಕುಗಳಲ್ಲಿ ಮಾತ್ರ VPA (Virtual Payment Address) ಲಭ್ಯವಿದ್ದು, ಪಾವತಿ ಮಾಡಲು ಅವಕಾಶವಿರುತ್ತದೆ.

| | | |
|---|---|---|
| 1. State Bank of India | 2. Canara Bank | 3. Bank of Baroda |
| 4. Axis Bank | 5. Indian Bank | 6. HDFC Bank |
| 7. ICICI Bank | 8. Punjab National Bank | 9. UCO Bank |

ಆದ್ದರಿಂದ ಮೇಲೆ ತಿಳಿಸಿರುವ ಬ್ಯಾಂಕ್‌ಗಳ ಶಾಖೆಗಳಲ್ಲಿ ಖಾತೆಯನ್ನು ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಮೈಸೂರು ತಾಲ್ಲೂಕಿನ ಎಲ್ಲಾ ಪದವಿ/ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರುಗಳು/ಆಡಳಿತಾಧಿಕಾರಿಗಳು/ಡೀನ್ ರವರುಗಳು ವಿದ್ಯಾಸಂಸ್ಥೆಯ ಬ್ಯಾಂಕಿನ ನಿಖರವಾದ VPA (Virtual Payment Address)ಅನ್ನು ಪಡೆದು, Branch Manager (Bank) ಮತ್ತು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ/ಡೀನ್/ಆಡಳಿತಾಧಿಕಾರಿಗಳ ಜಂಟಿ ಸಹಿಯೊಂದಿಗೆ VPA ID ಯನ್ನು ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಈ ಕಛೇರಿಯ ಅಧಿಕಾರಿಗಳಿಗೆ ಕಡ್ಡಾಯವಾಗಿ ಈ ಕೂಡಲೇ ಸಲ್ಲಿಸಲು ಸೂಕ್ತ ನಿರ್ದೇಶನ ಹಾಗೂ ಮಾರ್ಗದರ್ಶನ ನೀಡಬೇಕೆಂದು ಈ ಮೂಲಕ ತಮ್ಮನ್ನು ಕೋರಿದೆ. ತಪ್ಪಿದಲ್ಲಿ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿವೇತನವನ್ನು e-rupee ಮೂಲಕ ಅನುಷ್ಟಾನಗೊಳಿಸಲು ವಿಳಂಬವಾಗುವುದರಿಂದ ಅತಿ ತುರ್ತಾಗಿ ಈ ಬಗ್ಗೆ ನಿಮ್ಮ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಪದವಿ/ಸ್ನಾತಕೋತ್ತರ ಕಾಲೇಜುಗಳ ಮುಖ್ಯಸ್ಥರುಗಳಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಕ್ತ ತಿಳುವಳಿಕೆ ನೀಡಿ ಅತಿ ಶೀಘ್ರವಾಗಿ ಕಾರ್ಯಗತಗೊಳಿಸಲು ತಮ್ಮನ್ನು ಕೋರಲಾಗಿದೆ.

ಲಗತ್ತು:- ಉಲ್ಲೇಖ (2)ರ ಮಾನ್ಯ ಆಯುಕ್ತರ ಸಭೆಯ ನಡವಳಿಗಳನ್ನು ಲಗತ್ತಿಸಿದೆ.

ತಮ್ಮ ನಂಬುಗೆಯ

ಸಹಾಯಕ ನಿರ್ದೇಶಕರು ಗ್ರೇಡ್-1
ಸಮಾಜ ಕಲ್ಯಾಣ ಇಲಾಖೆ
ಮೈಸೂರು ತಾಲ್ಲೂಕು, ಮೈಸೂರು

ಪ್ರತಿಯನ್ನು:

1. ಉಪ ನಿರ್ದೇಶಕರು (ಶಿಕ್ಷಣ) ಹಾಗೂ ನೋಡಲ್ ಆಫೀಸರ್, ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
2. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಛೇರಿ ಪ್ರತಿ.

ಸಹಾಯಕ ನಿರ್ದೇಶಕರು ಗ್ರೇಡ್-1
ಸಮಾಜ ಕಲ್ಯಾಣ ಇಲಾಖೆ
ಮೈಸೂರು ತಾಲ್ಲೂಕು, ಮೈಸೂರು

## To Be Printed on College LetterHead

Institution / College Details

Date:

| | |
|---|---|
| Name of the Institution / College | |
| VPA (UPI ID) of the College | |
| Name of Point-of- Contact from the Institution / College | |
| e-Mail ID of Point-of-Contact from the Institution / College | |
| Mobile No. of Point-of-Contact from the Institution / College | |

*I confirm that the above details have been reviewed by me and have been found to be correct*

| | Institution / College | Bank |
|---|---|---|
| **Signature and Seal** | | |
| Name | | |
| Designation | | |

**ಮಾನ್ಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 17.02.2023 ರಂದು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು e-Rupi ಮುಖಾಂತರ ಅನುಷ್ಠಾನ ಮಾಡುವ ಸಂಬಂಧ ನಡೆದ ಸಭೆಯ ನಡವಳಿಗಳು.**

ಉಪಸ್ಥಿತಿ:

1) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
2) ಅಪರ ನಿರ್ದೇಶಕರು (ಅಭಿವೃದ್ಧಿ), ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
3) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು
4) ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
5) ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಬೆಂಗಳೂರು
6) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ
7) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ
8) ಯೋಜನಾ ನಿರ್ದೇಶಕರು, ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್, ಇ-ಆಡಳಿತ ಕೇಂದ್ರ, ಬೆಂಗಳೂರು
9) ಯೋಜನಾ ನಿರ್ದೇಶಕರು, ಡಿ.ಬಿ.ಟಿ ಪೋರ್ಟಲ್, ಇ-ಆಡಳಿತ ಕೇಂದ್ರ, ಬೆಂಗಳೂರು
10) ವಿಶೇಷಾಧಿಕಾರಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು
11) ಎ.ಜಿ.ಎಂ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜಿ.ಬಿ.ಯು. ಬೆಂಗಳೂರು
12) ಶಾಖಾ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ರೇಸ್ ಕೋರ್ಸ್ ರೋಡ್ ಬ್ರಾಂಚ್, ಬೆಂಗಳೂರು
13) ಉಪ ನಿದೇಶಕರು (ಶಿಕ್ಷಣ), ಸಮಾಜ ಕಲ್ಯಾಣ ಇಲ್ಯಾಣ ಇಲಾಖೆ, ಬೆಂಗಳೂರು

*****

ಉಪ ನಿರ್ದೇಶಕರು (ಶಿಕ್ಷಣ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಸ್ವಾಗತ ಕೋರುತ್ತಾ, ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಮಾನ್ಯ ಆಯುಕ್ತರಿಗೆ ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

ಮಾನ್ಯ ಆಯುಕ್ತರು ಮಾತನಾಡುತ್ತಾ, ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮವು ಸಂಪೂರ್ಣ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಹೊರಡಿಸಲಾಗುವ ಮಾರ್ಗಸೂಚಿಗಳನ್ವಯ ಕಾರ್ಯಕ್ರಮ ಅನುಷ್ಠಾನ ಮಾಡಲಾಗುತ್ತಿದೆ. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಾರ್ಗಸೂಚಿ (2020-21 ರಿಂದ 2025-26) ರನ್ವಯ 2021-

22ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಮಂಜೂರಾದ ಸಂಪೂರ್ಣ ವಿದ್ಯಾರ್ಥಿವೇತನ ಮೊತ್ತವನ್ನು ವಿದ್ಯಾರ್ಥಿಗಳ ಆಧಾರ್ ಜೋಡಿತ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದೆ. ಆದರೆ, ವಿದ್ಯಾರ್ಥಿಗಳ ಖಾತೆಗೆ ಜಮೆಯಾದ ಮೊತ್ತವನನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ಸಂಬಂಧಪಟ್ಟ ವಿದ್ಯಾಸಂಸ್ಥೆಗೆ ಪಾವತಿ ಮಾಡಬೇಕಾಗಿರುತ್ತದೆ. ಆದರೆ, ವಿದ್ಯಾರ್ಥಿಗಳು ಸದರಿ ಮೊತ್ತವನ್ನು ವಿದ್ಯಾಸಂಸ್ಥೆಗೆ ಪಾವತಿ ಮಾಡಲು ನಿರಾಕರಿಸುತ್ತಿರುವುದಾಗಿ ದೂರುಗಳು ಸ್ವೀಕೃತಿಯಾಗಿರುತ್ತದೆ. ಈ ಸಂಬಂಧ 2022-23ನೇ ಸಾಲಿನಲ್ಲಿ **e-Rupi** ವ್ಯವಸ್ಥೆಯನ್ನು ಅಳವಡಿಸಲು ಕ್ರಮವಹಿಸಲಾಗಿದೆ. ಈ ಸಂಬಂಧ ಪ್ರಾಯೋಗಿಕವಾಗಿ ಕರ್ನಾಟಕ ರಾಜ್ಯದಲ್ಲಿ E Rupi ಅನ್ನು ಜಾರಿಗೆ ತರುವ ಸಂಬಂಧ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದ್ದು, ಕೂಡಲೇ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ತುರ್ತಾಗಿ ಸಭೆ ಆಯೋಜಿಸಿರುವುದಾಗಿ ಸಭೆಗೆ ಮಾಹಿತಿ ನೀಡಿದರು.

ಮುಂದುವರೆದು, ಪ್ರಸಕ್ತ ಸಾಲಿನಿಂದಲೇ e Rupi ಅನ್ನು ಯಶಸ್ವಿಯಾಗಿ ಜಾರಿ ಮಾಡಲು ಉದ್ದೇಶಿಸಿದ್ದು, ಇದಕ್ಕಾಗಿ ಎಲ್ಲಾ ಇಲಾಖೆಗಳ ಸಹಕಾರ ಅಗತ್ಯವಾಗಿದ್ದು, ಈ ಸಂಬಂಧ ಕೂಡಲೇ ಈ ಕೆಳಕಂಡ ಕ್ರಮಗಳನ್ನು ತಮ್ಮ-ತಮ್ಮ ಇಲಾಖೆ ವತಿಯಿಂದ ಕೈಗೊಳ್ಳಲು ಕೋರಿದರು:

1. ಎಲ್ಲಾ ಇಲಾಖೆಗಳು ತಮ್ಮ-ತಮ್ಮ ವ್ಯಾಪ್ತಿಯ ಕಾಲೇಜು / ಶಿಕ್ಷಣ ಸಂಸ್ಥೆಗಳಿಗೆ ಈ ಕೂಡಲೇ ನಿರ್ದೇಶನ ನೀಡಿ, ಈಗಾಗಲೆ ಸಮಾಜ ಕಲ್ಯಾಣ ಇಲಾಖೆಯು ನೀಡಿರುವ ನಿಗದಿತ ನಮೂನೆಯಲ್ಲಿ ಆಯಾಯ ಸಂಸ್ಥೆಗಳ ಬ್ಯಾಂಕಿನ VPA ಅನ್ನು ಸಮಾಜ ಕಲ್ಯಾಣ ಇಲಾಖೆಯ ಕ್ಷೇತ್ರ ಅಧಿಕಾರಿಗಳಿಗೆ ಸಲ್ಲಿಸುವಂತೆ ಸೂಚಿಸುವುದು ಹಾಗೂ ಈ ಬಗ್ಗೆ ತಮ್ಮ ತಮ್ಮ ಇಲಾಖೆಯ ವತಿಯಿಂದ ಸುತ್ತೋಲೆಯನ್ನು ಹೊರಡಿಸುವುದು.

2. ಒಂದು ವೇಳೆ ಸೂಚಿಸಿದ ಬ್ಯಾಂಕುಗಳಲ್ಲಿ ಖಾತೆಯನ್ನು ಹೊಂದದೇ ಇದ್ದಲ್ಲಿ (ಪ್ರಸ್ತುತ e Rupi ಗಾಗಿ ಈ ಬ್ಯಾಂಕುಗಳು ಮಾತ್ರ ಚಾಲ್ತಿಯಲ್ಲಿರುತ್ತದೆ : SBI, Canara, Bank of Baroda, Axis, Indian Bank, HDFC, ICICI, PNB ಮತ್ತು UCO) ಸದರಿ ಸೂಚಿಸಿದ ಯಾವುದಾದರೂ ಒಂದು ಬ್ಯಾಂಕಿನಲ್ಲಿ ವಿದ್ಯಾರ್ಥಿವೇತನ ಬಾಬ್ತಿನ ಕಾಲೇಜು ಶುಲ್ಕ ಮರುಪಾವತಿ ಉದ್ದೇಶಕ್ಕಾಗಿ ಪ್ರತ್ಯೇಕ ಖಾತೆಯನ್ನು ಕೂಡಲೇ ತೆರೆದು, VPA ಪಡೆದು ಅದನ್ನು ಸಮಾಜ ಕಲ್ಯಾಣ ಇಲಾಖೆಯ ಕ್ಷೇತ್ರ ಅಧಿಕಾರಿಗಳಿಗೆ ಸಲ್ಲಿಸುವಂತೆ ಸೂಚಿಸುವುದು ಹಾಗೂ ಈ ಬಗ್ಗೆ ತಮ್ಮ ತಮ್ಮ ಇಲಾಖೆಯ ವತಿಯಿಂದ ಸುತ್ತೋಲೆಯನ್ನು ಹೊರಡಿಸುವುದು.

3. ತಮ್ಮ-ತಮ್ಮ ವ್ಯಾಪ್ತಿಯ ಪ್ರತಿಯೊಂದು ಕಾಲೇಜಿನಲ್ಲಿ, e-Rupi Voucher Redemption ಸಂಬಂಧ ಅಧಿಕಾರಿಯನ್ನು ನೇಮಿಸುವುದು. ಅಂತಹ ಅಧಿಕಾರಿಗಳಿಗೆ SBI ರವರಿಂದ ಈ ಬಗ್ಗೆ ಈ ಸಂಬಂಧ ಸೂಕ್ತ ತರಬೇತಿ ಒದಗಿಸಲು ಕ್ರಮವಹಿಸಲಾಗುವುದು.

4. ಈಗಾಗಲೇ ಹಲವಾರು ಕಾಲೇಜುಗಳು ವಿದ್ಯಾರ್ಥಿಗಳಿಂದ ದಾಖಲಾತಿ ಸಮಯದಲ್ಲಿ ಶುಲ್ಕವನ್ನು ಪಾವತಿಸಿಕೊಂಡಿದ್ದರೆ, e Rupi Redemption ನಂತರದಲ್ಲಿ ಕೂಡಲೇ ಆ ಮೊತ್ತವನ್ನು ವಿದ್ಯಾರ್ಥಿಗೆ ಮರುಪವಾತಿಸಬೇಕು. ಒಂದು ವೇಳೆ ವಿದ್ಯಾರ್ಥಿಯು ದಾಖಲಾತಿ ಸಮಯದಲ್ಲಿ ಕಾಲೇಜಿಗೆ ಹಣ ತುಂಬಿದ್ದು, e Rupi Redemption ನಂತರದಲ್ಲಿ ಮರುಪಾವತಿ ಆಗಿಲ್ಲ ಎಂಬ ದೂರು ಬಂದಲ್ಲಿ ನೇರವಾಗಿ ಅಂತಹ ಕಾಲೇಜಿನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಕ್ರಮವಹಿಸಲಾಗುವುದು ಹಾಗೂ ಮುಂದಿನ ದಿನಗಳಲ್ಲಿ ಅಂತಹ ಶಿಕ್ಷಣ ಸಂಸ್ಥೆಯನ್ನು e Rupi ವ್ಯಾಪ್ತಿಯಿಂದ ಹೊರಗಿಡಲಾಗುವುದು.

5. 2022-23 ನೇ ಸಾಲಿನಲ್ಲಿ ಕೋರ್ಸುವಾರು ನಿಗದಿಯಾದ ಶುಲ್ಕಗಳನ್ನು ಅನುಮೋದನೆ ಮಾಡಲು ಇಲಾಖೆಗೆ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಈ ಸಂಬಂಧ ಎಲ್ಲಾ ವಿಶ್ವವಿದ್ಯಾಲಯ/ಮಂಡಳಿ/ಇಲಾಖೆಗಳು ಕೋರ್ಸುವಾರು ನಿಗದಿಯಾದ ಶುಲ್ಕದ ವಿವರ ಹಾಗೂ ಸರ್ಕಾರದ ಆದೇಶಗಳನ್ನು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಕಛೇರಿಯ ವಿದ್ಯಾರ್ಥಿವೇತನ ಕೋಶಕ್ಕೆ ಸಲ್ಲಿಸಲು ಕ್ರಮವಹಿಸುವುದು.

6. ವಿದ್ಯಾರ್ಥಿಯ ಶೈಕ್ಷಣಿಕ ವಿವರಗಳಾದ Bonafide Details ಗಳನ್ನು ನಿಗದಿತ ಅವಧಿಯೊಳಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶಕ್ಕೆ ಒದಗಿಸಲು ಕ್ರಮವಹಿಸುವುದು. ಮುಂದುವರೆದು, ಈಗಾಗಲೇ Share ಆಗಿರುವ Bonafide ವಿವರಗಳಲ್ಲಿ ಕೆಲವು ವಿದ್ಯಾರ್ಥಿಗಳ ವಿವರಗಳು ತಪ್ಪಾಗಿರುವ ಹಿನ್ನೆಲೆಯಲ್ಲಿ, ಸಂಬಂಧಪಟ್ಟ ವಿಶ್ವವಿದ್ಯಾಲಯಕ್ಕೆ Edit ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ಬಗ್ಗೆ ಕೂಡಲೇ ಕ್ರಮವಹಿಸುವುದು.

ಮುಂದುವರೆದು, e-Rupi ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಮುಖ Stakeholders ಗಳಾದ SBI, NPCI, DBT, SSP ರವರು ಈಗಾಗಲೇ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಹಾಗೂ API ರೂಪಿಸುವ ಬಗ್ಗೆ ಪ್ರಗತಿ ವರದಿಯನ್ನು ಆಯುಕ್ತರು ಪಡೆದು ಈ ಕೆಳಕಂಡಂತೆ ಸೂಚನೆಗಳನ್ನು ನೀಡುವುದು.

17/02

| Sl No | Department/Stakeholders | Action to be taken |
|---|---|---|
| 1) | SBI | 1) To update the Progress regarding development of dashboard.<br>2) To issue directions to all its branches to provide VPA IDs to intuitions who are having SB Accounts also.<br>3) To issue directions to all its branches to honour VPA request for e-Rupi purpose.<br>4) To Provide a timeline regarding development of dashboard.<br>5) To provide process flow regarding one to one e-Rupi voucher generation in coordination with NPCI and DBT. |
| 2) | DBT | 1) To Speed up the API development process.<br>2) To provide process flow regarding one to one e-Rupi voucher generation in coordination with NPCI and SBI. |
| 3) | NPCI | 1) To provide process flow regarding one to one e-Rupi voucher generation in coordination with DBT and SBI.<br>2) To coordinate with DBT for development of API. |
| 4) | SSP | 1) To make provision in the SSP Portal to capture the VPAs of the institutions by 21 feb 2023<br>2) To make necessary arrangements for sending files to DBT for generation of e-Rupi for fee and maintenance portion of scholarship. |

ಮುಂದುವರೆದು, SBI ರವರು ತಮ್ಮ ಶಾಖೆಗಳಲ್ಲಿ ಬ್ಯಾಂಕ್ ಖಾತೆಯನ್ನು ಹೊಂದಿರುವ ಕಾಲೇಜುಗಳ ಸಂಬಂಧ VPA Generate ಮಾಡಲು ತಾಲ್ಲೂಕುವಾರು ವೇಳಾಪಟ್ಟಿಯನ್ನು ನಿಗದಿಪಡಿಸಿದ್ದು, ದಿನಾಂಕ:20-02-2023 ರಿಂದಲೇ ಜಾರಿಗೆ ಬರುವಂತೆ ವೇಳಾಪಟ್ಟಿಯನ್ನು ನಿಗಧಿಮಾಡಿರುತ್ತಾರೆ. ಈ ಹಿನ್ನಲೆಯಲ್ಲಿ ಈ ನಡವಳಿಗೆ ಲಗತ್ತಿಸಿರುವ ವೇಳಾಪಟ್ಟಿಯಂತೆ ತಮ್ಮ ಜಿಲ್ಲಾವ್ಯಾಪ್ತಿಯಲ್ಲಿನ ಎಲ್ಲಾ ತಾಲ್ಲೂಕುಗಳಲ್ಲಿ ಸದರಿ SBI ಅಧಿಕಾರಿಗಳು ಆಯಾ ದಿನಾಂಕದಂದು ಭೇಟಿ ನೀಡಲಿದ್ದು, ಸದರಿ ಬ್ಯಾಂಕ್ ಅಧಿಕಾರಿಗಳಿಗೆ ಸಹಕಾರ ನೀಡುವುದಲ್ಲದೇ, ಸಂಬಂಧಪಟ್ಟ ಕಾಲೇಜುಗಳಿಗೆ ಈ ಬಗ್ಗೆ ಮಾಹಿತಿ ನೀಡಿ ಸೂಚಿದ ದಿನಾಂಕದಲ್ಲಿ ಇಲಾಖೆಯ ತಾಲ್ಲೂಕು ಮಟ್ಟದ

ಕಛೇರಿಗೆ ಹಾಜರಾಗಿ VPA ಪಡೆಯಲು ಕಾಲೇಜುಗಳಿಗೆ ಸೂಚಿಸುವ ನಿಟ್ಟಿನಲ್ಲಿ ಇಲಾಖೆಯ ಎಲ್ಲಾ ಜಂಟಿ/ಉಪ ನಿರ್ದೇಶಕರಿಗೆ ನಿರ್ದೇಶಿಸಿದೆ.

ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು.

17/02/23

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ
ಬೆಂಗಳೂರು

ಪ್ರತಿಯನ್ನು:

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ), ಬೆಂಗಳೂರು ರವರಿಗೆ ಮಾಹಿತಿಗಾಗಿ.
3) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು
4) ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
5) ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಬೆಂಗಳೂರು
6) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ
7) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ
8) ಅಪರ ನಿರ್ದೇಶಕರು (ಅಭಿವೃದ್ಧಿ), ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
9) ಯೋಜನಾ ನಿರ್ದೇಶಕರು, ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್, ಇ-ಆಡಳಿತ ಕೇಂದ್ರ
10) ಯೋಜನಾ ನಿರ್ದೇಶಕರು, ಡಿ.ಬಿ.ಟಿ. ಇ-ಆಡಳಿತ ಕೇಂದ್ರ
11) ವಿಶೇಷಾಧಿಕಾರಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು
12) ಎ.ಜಿ.ಎಂ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜಿ.ಬಿ.ಯು. ಬೆಂಗಳೂರು
13) ರಾಜ್ಯದ ಎಲ್ಲಾ ಜಿಲ್ಲೆಗಳ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಸೂಕ್ತಕ್ರಮಕ್ಕಾಗಿ.
14) ರಾಜ್ಯದ ಎಲ್ಲಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಸೂಕ್ತಕ್ರಮಕ್ಕಾಗಿ.

15)ಶಾಖಾ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ರೇಸ್ ಕೋರ್ಸ್ ರೋಡ್ ಬ್ರಾಂಚ್, ಬೆಂಗಳೂರು

16)ಕಛೇರಿ ಪ್ರತಿ.

| Districts | No. of Colleges | No. of Taluks in District | 20th Feb | 21st Feb | 22nd Feb | 23rd Feb | 24th Feb | 27th Feb | 28th Feb |
|---|---|---|---|---|---|---|---|---|---|
| BAGALKOT | 144 | 7 | Bagalkot | Badami | Jamkhandi | Bagalkot | Bagalkot | Mudhol | Jamkhandi |
| BALLARI | 131 | 8 | Ballari | Hospet | Ballari | Kudligi | Ballari | Hospet | |
| BELAGAVI | 357 | 11 | Belgaum | Belgaum, Chikodi | | Belgaum, Gokak | Belgaum, Hukkeri | Khanapur, Saundatti, Ramdurg | Others |
| BENGALURU RURAL | 73 | 5 | | Doddaballapur | | Hoskote | | Nelamangala | |
| BENGALURU URBAN | 710 | 5 | BN, BS | BN, BS | BE, Anekal | BN, BS | BN,BS | BN,BS | |
| BIDAR | 172 | 6 | Bidar | Bidar | Humnabad | Bhalki, Basavkalyan | Bidar | | |
| CHAMRAJANAGAR | 19 | 5 | | Chamrajnagar | Chamrajnagar | | | | |
| CHIKKABALLAPUR | 58 | 7 | Chikballapur | Chikballapur | Chintamani | Chintamani | | | |
| CHIKKAMAGALURU | 49 | 8 | Chikmagalur | Chikmagalur | Kadur | Kadur | | | |
| CHITRADURGA | 128 | 7 | Chitradurga | Chitradurga | Challakere | Hiriyur | Hosadurga | Others | |
| DAKSHINA KANNADA | 222 | 6 | Mangaluru | Mangaluru | Mangaluru | Mangaluru | Bantwal | Puttur | Sullia |
| DAVANAGERE | 87 | 7 | Davangere | Davangere | Davangere | Harihara | Harapanahalli | | |
| DHARWAD | 190 | 6 | Hubli | Hubli | Dharwad | | Dharwad | Hubli | |
| GADAG | 72 | 6 | | | | Gadag | | Ron | |
| HASSAN | 85 | 9 | Hassan | Hassan | Channarayapatna | Hassan | Channarayapatna | | |
| HAVERI | 89 | 8 | | Haveri | | Hangal | | Hirekerur | Ranebennur |
| KALABURAGI | 208 | 8 | Kalaburgi | Kalaburgi | Kalaburgi | Kalaburgi | Kalaburgi | Aland | Jewargi |
| KODAGU | 32 | 4 | Somwarpet | Somwarpet | Virajpet | Virajpet | | | |
| KOLAR | 121 | 6 | | Kolar | Kolar | Bangarpet | Mulbagal | Srinivaspura | |
| KOPPAL | 67 | 5 | | | Koppal | Gangavathi | Gangavathi | Koppal | |
| MANDYA | 64 | 8 | Mandya | | Mandya | | | | |
| MYSORE | 102 | 8 | Mysore | Mysore | Mysore | Mysore | | | |
| RAICHUR | 103 | 6 | Raichur | Raichur | Manvi | Lingasur | Sindhanur | | |
| RAMANAGARA | 51 | 5 | | Ramnagara | Ramnagara | channapatna | channapatna | | |
| SHIVAMOGGA | 65 | 8 | Shimoga | Shimoga | Bhadravathi | Bhadravathi | | | |
| TUMAKURU | 118 | 11 | Tiptur | Tiptur | Tumkur | Tumkur | Tumkur | | |
| UDUPI | 82 | 4 | Udupi | Udupi | Udupi | | | | |
| UTTARA KANNADA | 41 | 12 | Karwar | Karwar | Dandeli | | | | |
| VIJAYAPURA | 215 | 6 | Bijapur | Bijapur | Bijapur | Indi | Basavana bagewadi | Sindagi | Others |
| YADGIR | 106 | 4 | Yadgir | Yadgir | Shorapur | Shorapur | Others | | |
| Grand Total | 3961 | 206 | | | | | | | |

## Document Checklist for Merchant On-boarding

**Key Points**

*Please note that not all documents are mandatory. Any of the documents from the below list can be provided from each category as per merchant's profile, nature of business and availability

*To evaluate the merchant for on-boarding, DTL enhancement or ICA enablement, the Risk Team may seek for any additional documents from the given list however, in some case additional document not limited to the list may be required

*It should be noted that the document requirements may vary from merchant to merchant and there might be additional requirements for documents not limited to the list depending on the case.

# Merchant On-boarding

### Individual (Professionals)

- **Proof of Identity –** PAN Card / Aadhar Card / Passport/ Driving License
- **Business / Profession Proof –** AnyRegistered License
- **Financial Proof –**Bank Statement Or Cancelled cheque

### Proprietorship Firm

- **Proof of Identity (Individuals)** - PAN Card/ Aadhar Card / Driving License / Passport / Voter ID
- **Business proof-**GST Registration / Shop and Establishment Act License / MSME Registration / All relevant commercial permits, licenses, and certificates
- **Financial proof-**Bank Statement Or Cancelled cheque

### Partnership Firm

- **Proof of Identity (Individual) -** PAN Card (All Partners) / Aadhar Card (All partners) / Voter ID, Driving License / Passport
- **Proof of Identity (Entity)** - PAN Card (Partnership Firm)
- **Business Proof**- GST Registration / Shop and Establishment Act License / MSME Registrationas well as all relevant commercial permits, licenses, and certificates
- **Financial Proof**- Bank Statement Or Cancelled cheque

### Trust/Society/Association/NGO

- **Proof of Identity (Individual)** –PAN Card (All parties)/Aadhar Card (All parties)/ Voter ID/ Driving License / Passport
- **Proof of Identity (Entity)** - PAN Card (Firm)
- **Business Proof**- GST Registration / Shop and Establishment Act License / MSME Registrationas well as all relevant commercial permits, licenses, and certificates
- **Financial Proof**- Bank Statement Or Cancelled cheque

Private Company

- **Proof of Identity (Individuals)**– PAN Card (All Directors) / Aadhar Card (All Directors) / Passport
- **Proof of Identity (Entity)** -Company PAN, Incorporation Certificate
- **Business Proof**- All relevant commercial permits, licenses, and certificates
- **Financial Proof**–Bank Statement Or Cancelled cheque.

Government Departments

- **Proof of Identity**- Govt. Notification, Letter from the ministry acknowledging the constitution of the entity, etc. / PAN Card / Form 60

******End of the Document*******

SBI Payments